ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

## ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 333 /2021 .

ಫ್ರಾ.ಸಾ. : 3
ಚಾ.ಸಾ. : 3

| | | |
|---|---|---|
| ಹೆಸರು | : | ದರ್ಶನ್ |
| ತಂದೆಯ ಹೆಸರು | : | ರಮೇಶ್ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ವ್ಯವಸಾಯ |
| ವಿಳಾಸ | : | ಕೋತೂರು |

... ................................................................................................................. ...

ದಿನಾಂಕ 05 ನೇ ಆಗಸ್ಟ್2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ :-

ಚಾಸಾ 2 ನನ್ನ ತಾಯಿ. ದಿ.11.09.2020 ರಂದು ರಾತ್ರಿ ಒಂದು ಜೋಳ ತುಂಬಿದ ಲಾರಿ ಬಂದು ಕೊತೋರು ಗ್ರಾಮದ ಬಸ್ ನಿಲ್ದಾಣಕ್ಕೆ ಅದರ ಪಕ್ಕದಲ್ಲಿದ್ದ ಅಂಗಡಿ ಶೆಡ್‌ಗೆ , ವಿದ್ಯುತ್ ಕಂಬಕ್ಕೆ ಬೇಲಿಗೆ ಡಿಕ್ಕಿ ಪಡಿಸಿರುತ್ತದೆ. ಅದರಿಂದ ಬಸ್ ನಿಲ್ದಾಣ ಹಾಗೂ ನಮ್ಮ ಅಂಗಡಿ ಶೆಡ್ ಸಂಪೂರ್ಣವಾಗಿ ಜಖಂಗೊಂಡಿರುತ್ತದೆ. ತಕ್ಷಣ ಬಂದು ನಾವು ಪರಿಶೀಲಿಸಿದೆವು. ನಾವು ತಕ್ಷಣ ವಿದ್ಯುತ್ ಇಲಾಖೆಯವರಿಗೆ ಹಾಗೂ ಪೊಲೀಸರಿಗೆ ಮಾಹಿತಿ ನೀಡಿರುತ್ತೇವೆ. ಮರುದಿನ ಪಿ ಡಿ ಓರವರಿಗೆ ತಿಳಿಸಿರುತ್ತೇವೆ. ಆನಂತರ ನಾವೆಲ್ಲರೂ ಹೋಗಿ ದೂರು ನೀಡಿರುತ್ತೇನೆ. ದಿ. 12.09.2020 ರಂದು ಸ್ಥಳಕ್ಕೆ ಬಂದು ಪೊಲೀಸರು ಪರಿಶೀಲಿಸಿದರು. ನಾನು ಸಹ ಸಹಿ ಮಾಡಿರುತ್ತೇನೆ. ಸ್ಥಳದಲ್ಲಿದ್ದ ಲಾರಿಯನ್ನು ಪೊಲೀಸರು ಅಮಾನತುಪಡಿಸಿದರು. ನಿ ಪಿ 1 ರಿಂದ 13 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ.

ಸ್ಥಳ ಮಹಜರ್ ಅನ್ನು ನಿಪಿ 15 ಎಂದು, ಸಾಕ್ಷಿ ಸಹಿಯನ್ನು ನಿ ಪಿ15 ಎ ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು</u> :- ಆರೋಪಿ ಪರ ವಕೀಲರವರಿಂದ :-

ಶೆಡ್ ಇದ್ದ ಸ್ಥಳ ನಮಗೆ ಸೇರಿದ್ದು, ಆ ಬಗ್ಗೆ ದಾಖಲಾತಿಗಳನ್ನು ತನಿಖಾದಿಕಾರಿಗೆ ನೀಡಿರುತ್ತೇನೆ. ನಾನು ಹೇಳಿದಂತೆ ಸ್ಥಳದಲ್ಲಿ ಯಾವುದೇ ಶೆಡ್ ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತ ನಂತರ ನಾನು ಸ್ಥಳಕ್ಕೆ ಹೋಗಿದ್ದೇನೆ ಎಂದರೆ ಸರಿ. ಆದಿನ ಮಳೆ ಬರುತ್ತಿರಲಿಲ್ಲ ಎನ್ನುತ್ತಾರೆ. ಲಾರಿ ಬಸ್ ನಿಲ್ದಾಣಕ್ಕೆ ಶೆಡ್‌ಗೆ ಹಾಗೂ ವಿದ್ಯುತ್ ಕಂಬಕ್ಕೆ ಡಿಕ್ಕಿ ಪಡಿಸಿಲ್ಲ ಎಂದರೆ ಸರಿಯಲ್ಲ. ಚಾಸಾ 1 ನನ್ನ ತಾಯಿ ಆದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ಸ್ಥಳದ ಚೆಕ್ಕು ಬಂದಿ ಪೂ - ರಸ್ತೆ, ಪ - ಹರಿಹರ ರಸ್ತೆ ಹಾಗೂ ಜಂಕ್ಷನ್, ಉ - ಕಾನೂರು ರಸ್ತೆ, ದ- ನಮ್ಮ ಮನೆ. ಲಾರಿಯ ಮಾಲೀಕರು ಯಾರು ಹಾಗೂ ಚಾಲಕ ಯಾರು ಎಂದು ನಮಗೆ ಪೊಲೀಸರು ತಿಳಿಸಿದ ಕಾರಣ ನನಗೆ ತಿಳಿಯಿತು ಎಂದರೆ ಸರಿ.

ಮಹಜರ್‌ಗೆ ಸಹಿಯನ್ನು ಠಾಣೆಯಲ್ಲಿ ಮಾಡಿದ್ದೇನೆ ಎಂದರೆ ಸರಿಯಲ್ಲ, ಸ್ಥಳದಲ್ಲಿ ಮಾಡಿದ್ದೇನೆ ಎನ್ನುತ್ತಾರೆ. ಲಾರಿಯಿಂದ ನಮಗೆ ಯಾವುದೇ ತೊಂದರೆ, ನಷ್ಟ ಆಗಿಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆ</u> :- - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)